ದಿನಾಂಕಃ **14.02.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಕೆ.ಕೆ.ಎಂ ರವರಿಂದಃ

ನಾನು ಯಾವ ಕಾರಣಕ್ಕಾಗಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎನ್ನುವ ವಿಷಯ ನನಗೆ ಗೊತ್ತು. ವಾದಿಗಳು ಈ ದಾವೆಯನ್ನು ನಡೆಸಲು ನನಗೆ ಜಿಪಿಎ ಕೊಟ್ಟಿರುತ್ತಾರೆ. 2 ನೇ ವಾದಿ ರುದ್ರೇಶ್ ರವರಿಗೆ ಈಗ ಸುಮಾರು 54 ವರ್ಷ ವಯಸ್ಸಾಗಿರುತ್ತದೆ. 2 ನೇ ಪ್ರತಿವಾದಿ ರುದ್ರೇಶ್ ರವರು ನ್ಯಾಯಾಲಯಕ್ಕೆ ಬಂದು ತನ್ನ ಪರ ಸಾಕ್ಷ್ಯ ನುಡಿಯಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ರುದ್ರೇಶ್ ರವರು ಸಕ್ಕರೆ ಕಾಯಿಲೆ ಇದ್ದು ಬಳಲುತ್ತಿದ್ದಾರೆ ಆದ ಕಾರಣ ಅವರು ನ್ಯಾಯಾಲಯಕ್ಕೆ ಬರಲು ಆಗುವುದಿಲ್ಲ. 1 ನೇ ವಾದಿ ಗೌರಮ್ಮ ಸಹ ಹೃದಯ ಸಂಬಂಧಿತ ಕಾಯಿಲೆ ಇದ್ದು ಬಳಲುತ್ತಿದ್ದಾರೆ. ವಾದಿಗಳು ಕಾಯಿಲೆ ಇದ್ದು ಬಳಲುತ್ತಿದ್ದಾರೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ವಾದಿಗಳು ನನಗೆ ಕೊಟ್ಟಿರುವ ಜಿಪಿಎ ಯಲ್ಲಿ ಸಹ ವಾದಿಗಳು ಕಾಯಿಲೆ ಎನ್ನುವ ವಿಷಯವನ್ನು ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ.

ಪ್ರಸ್ತುತ ದಾವೆಯನ್ನು ವಾದಿಗಳು ಸೈಟ್ ನಂ.27 ಕುರಿತು ಸಲ್ಲಿಸಿರುತ್ತಾರೆ. ದಾವಾ ಸ್ವತ್ತನ್ನು ನನ್ನ ಮಾವ ದಿಃ15.06.1984 ರಲ್ಲಿ ಜಿ.ಪಿ.ಎ ಮೂಲಕ ಖರೀದಿಸಿರುತ್ತಾರೆ. ಸದರಿ ಜಿಪಿಎ ನೋಟ್ರಿ ಜಿಪಿಎ ಆಗಿರುತ್ತದೆ. ಸದರಿ ಜಿಪಿಎ ಕಾಪಿಯನ್ನು ನ್ಯಾಯಾಲಯಕ್ಕೆ ನಾನು ಹಾಜರು ಪಡಿಸಿರುತ್ತೇನೆ. ಪ್ರಸ್ತುತ ದಾವಾ ಸ್ವತ್ತು ಖಾಲಿ ನಿವೇಶನ ಆಗಿರುತ್ತದೆ. ಪ್ರತಿವಾದಿಗಳು ನನ್ನ ಸ್ವಾಧೀನಕ್ಕೆ ತಕರಾರು ವ್ಯಕ್ತ

ಪಡಿಸಿದ್ದಾಗಿ ಪ್ರತಿವಾದಿ ವಿರುದ್ಧ ನಾನು ಪೊಲೀಸ್ ದೂರನ್ನು ದಾಖಲಿಸಿರುತ್ತೇನೆ. ವಾದಿಗಳು ಮತ್ತು ಪ್ರತಿವಾದಿಗಳು ನಡುವೆ ದಿಃ**16.11.2021** ರಂದು ದಾವಾ ಸ್ವತ್ತಿನ ಸ್ವಾಧೀನಕ್ಕೆ ಸಂಬಂಧಿಸಿ ತಕರಾರು ನಡೆದಿರುತ್ತದೆ. ಸದರಿ ದಿನದಂದು ಪ್ರತಿವಾದಿಯೊಂದಿಗ ಸುಮಾರು **10-15** ಜನ ದಾವಾ ಸ್ವತ್ತಿನಲ್ಲಿ ಜಮಾಯಿಸಿದ್ದರು. ಸದರಿ ಕಾಲಕ್ಕೆ ನಾನು ದಾವಾ ಸ್ವತ್ತನ್ನು ಸುಚಿಗೊಳಿಸುತ್ತಿದ್ದೆ ಎಂದು ಸಾಕ್ಷಿಯು ಮುಂದುವರೆದು ನುಡಿದಿರುತ್ತಾರೆ. ನಿಪಿ-**12** ದೂರಿನಲ್ಲಿ ಸೈಟ್ ನಂಬರ್ ನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದ ಎಲ್ಲಾ ಮೂಲ ದಾಖಲೆಗಳನ್ನು ನಾನು ನೋಡಿರುತ್ತೇನೆ. ದಾವಾ ಸ್ವತ್ತಿನ ಮೇಲೆ ವಿಕ್ರೆಯದಾರರು ವಾದಿಯ ಹೆಸರಿಗೆ ಜಿಪಿಎ ಮಾಡುವ ಕಾಲಕ್ಕೆ ನಾನು ಸಹ ವಾದಿಯೊಂದಿಗೆ ಹಾಜರಿದ್ದೆ. ಆದರೆ ನಾನು ಜಿಪಿಎ ಗೆ ಸಾಕ್ಷಿಯಾಗಿ ಸಹಿ ಮಾಡಿಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿರುತ್ತಾರೆ ಕಾಲವಕಾಶ ನೀಡಿಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

ಓ. ಹೇ.ಕೇ.ಸ.ಇದೆ.

(ಓಂಕಾರಪ್ಪ. ಆರ್.)
**5** ನೇ ಅ.ನ.ಸಿ.ಸಿ. ನ್ಯಾಯಾಧೀಶರು,
ಬೆಂಗಳೂರು ನಗರ.